Reg. No. | | | | | | | | | |

**BCAKALN 101**

# I Semester B.C.A. Examination, April/May 2022
## (NEP – 2020) (2021 – 22 Batch Onwards)
## KANNADA
## Kannada Language (AECC)

Time : 2 Hours

Max. Marks : 60

(3×8=24)

I. ಕೆಳಗಿನ ಮೂರು ಪ್ರಶ್ನೆಗಳಿಗೆ ಉತ್ತರಿಸಿರಿ.

1) ‘ಸೂಟ್ಟಿಡೆಯಲಪ್ಪುದು ಕಾಣಾ’ ಕಾವ್ಯಭಾಗದಲ್ಲಿ ಕುಲದ ಬಗೆಗೆ ವ್ಯಕ್ತವಾಗುವ ದೃಷ್ಟಿಕೋನವನ್ನು ಬರೆಯಿರಿ.

ಅಥವಾ

ಶರಣರ ಕಾಯಕ ಮತ್ತು ದಾಸೋಹ ತತ್ವಗಳು ನುಲಿಯ ಚಂದಯ್ಯನ ವಚನಗಳಲ್ಲಿ ವ್ಯಕ್ತಗೊಂಡ ಬಗೆಯನ್ನು ಬರೆಯಿರಿ.

2) ಭೀಮಣ್ಣ ತನ್ನ ಪ್ರತಿಭೆಗೆ ಬಯಲಾಟವೇ ತಕ್ಕ ತಾಣ ಎಂದುಕೊಂಡು ಅಲ್ಲೇ ಬೇರುಬಿಟ್ಟ ಬಗೆಯನ್ನು ವಿವರಿಸಿ.

ಅಥವಾ

ಸಂಪನ್ಮೂಲಗಳನ್ನು ನಾಶಗೊಳಿಸದೆ ಅಭಿವೃದ್ಧಿಯ ಪಥವನ್ನು ಕಂಡುಕೊಳ್ಳುವ ಅನಿವಾರ್ಯತೆ ಇದೆ – ಈ ಮಾತನ್ನು ‘ಇರುವುದೊಂದೇ ಭೂಮಿ’ ಲೇಖನದ ಆಧಾರದ ಮೇಲೆ ವಿವರಿಸಿ.

3) ‘ಯುದ್ಧ ಭಾರತ’ ನಾಟಕದಲ್ಲಿ ಕೃಷ್ಣ ಹಸ್ತಿನಾವತಿಗೆ ಬಂದ ಉದ್ದೇಶವೇನು ? ಭೀಷ್ಮ ಮತ್ತು ಕೃಷ್ಣನ ನಡುವಿನ ಸಂಭಾಷಣೆ ಕುರಿತು ಬರೆಯಿರಿ.

ಅಥವಾ

ಶ್ರೀ ಕೃಷ್ಣನ ನೇತೃತ್ವದಲ್ಲಿ ಪಾಂಡವರು ಕುರುಕ್ಷೇತ್ರ ಯುದ್ಧದಲ್ಲಿ ಗೆಲುವನ್ನು ಪಡೆಯುತ್ತಾರೆ. ಇದನ್ನು ಯುದ್ಧ ಭಾರತ ನಾಟಕದ ಆಧಾರದಿಂದ ವಿವರಿಸಿ.

P.T.O.

(3×5=15)

II. ಕೆಳಗಿನ ಮೂರು ಪ್ರಶ್ನೆಗಳಿಗೆ ಉತ್ತರಿಸಿರಿ.

1) ವೃದ್ಧಾಪ್ಯದ ತಲ್ಲಣಗಳನ್ನು ಕವಿ 'ಕಣಿವೆಯ ಮುದುಕ' ಕವನದಲ್ಲಿ ಅಭಿವ್ಯಕ್ತಿಸಿದ ಬಗೆಯನ್ನು ವಿವರಿಸಿರಿ.

**ಅಥವಾ**

'ಅವ್ವನ' ವ್ಯಕ್ತಿತ್ವ ಪಿ. ಲಂಕೇಶ್ ಅವರ 'ಅವ್ವ' ಕವನದಲ್ಲಿ ಅನಾವರಣಗೊಂಡ ರೀತಿಯನ್ನು ಬರೆಯಿರಿ.

2) ದೇ. ಜವರೇಗೌಡರು ಶಿಕ್ಷಣ ಪಡೆಯಲು ಪಟ್ಟ ಪಾಡನ್ನು 'ಅಕ್ಷರ ಕಲಿಕೆಗಾಗಿ ಹೋರಾಟ' ಲೇಖನದ ಆಧಾರದ ಮೇಲೆ ವಿವರಿಸಿ.

**ಅಥವಾ**

ಡಾ. ಹಾ.ಮಾ. ನಾಯಕರ 'ಮಾತಿನ ಮಲ್ಲಿ' ಪ್ರಬಂಧದಲ್ಲಿ ಮಗುವಿನ ಬಾಲ್ಯ ಚಿತ್ರಣ ಒಡಮೂಡಿದ ಬಗೆಯನ್ನು ಬರೆಯಿರಿ.

3) ಯುದ್ಧಭಾರತ ನಾಟಕದಲ್ಲಿನ ಧೃತರಾಷ್ಟ್ರ-ಗಾಂಧಾರಿಯರ ಸಂಭಾಷಣೆಯ ಸ್ವಾರಸ್ಯವನ್ನು ಕುರಿತು ಬರೆಯಿರಿ.

**ಅಥವಾ**

'ಯುದ್ಧಭಾರತ' ನಾಟಕದಲ್ಲಿ ವಿದುರ-ಕೃಷ್ಣರ ಸಂಭಾಷಣೆ ಕುರಿತು ಬರೆಯಿರಿ.

(1×5=5)

III. ಒಂದು ಪದ್ಯಭಾಗದ ಸಂದರ್ಭವನ್ನು ಸೂಚಿಸಿ ಭಾವಾರ್ಥವನ್ನು ಬರೆಯಿರಿ.

ಗಂಗಾಸುತಂ ಪೃಥಾಸುತರಂ
ಗೆಲ್ದೊಡೆ ತಪಕೆ ಪೋಡೆನವರ್ಗಳ ಕೈಯೊಳ್।
ಗಾಂಗೇಯನಟೆದೊಡಹಿತರ
ನಾಂ ಗೆಲೆ ತಳ್ತಿಱೆವೆನನ್ನೆಗಂ ಬಿಲ್ವಿಡಿಯೆಂ

**ಅಥವಾ**

ಕತ್ತಲೆ ಬೋರ್ಡಿನ ಮೇಲೆ ಕಲಿತ ಅ ಆ
ಅಕ್ಷರಗಳ ನಡುವೆ ಅವ್ವ ಅಪ್ಪನ ಆಶೆಗಳು ಸಿಕ್ಕಿದವು
ನಮ್ಮೂರು ಕೇರಿ ಸಮಾಧಿಗಳು ಸಿಕ್ಕಿದುವು
ಅಸ್ಥಿಪಂಜರಗಳ ಪಾತಾಳದಲ್ಲಿ
ಒಂದಿಷ್ಟು ಮಾತುಗಳು ಸಿಕ್ಕಿದುವು.

IV. ಕೆಳಗಿನ **ಎರಡು** ಸಾಲುಗಳ ಸಂದರ್ಭವನ್ನು ಸೂಚಿಸಿ ಸ್ವಾರಸ್ಯವನ್ನು ಬರೆಯಿರಿ. **(2×4=8)**

1) ''ಎಂತು ಕಾದುವೆನೆನ್ನಯ ಮಕ್ಕಳೊಳಮೆನ್ನ ಮೊಮ್ಮಕ್ಕಳೊಳಂ''

2) ''ಗುರು-ಲಿಂಗ-ಜಂಗಮಕ್ಕೆ ಮಾಡುವುದೇ ಶಿವಪೂಜೆ''

3) ''ಒಡೆದ ನೋವಿನ ಟಿಸಿಲು ನಮ್ಮೂರ ಕಡಲು''

4) ''ಕಾರಕೂನನ ಕಪಾಳೆಕ ಬಡಿದರ ಶಿಪಾಯಿ ನೆಲಕ ಬಿತ್ತು''

V. ಕೆಳಗಿನ **ಎಲ್ಲಾ** ಪ್ರಶ್ನೆಗಳಿಗೆ **ಒಂದು** ಪದ ಅಥವಾ ವಾಕ್ಯದಲ್ಲಿ ಉತ್ತರಿಸಿರಿ. **(8×1=8)**

1) ಪಂಪನ ಪೂರ್ವಜರು ಯಾವ ಊರಿನವರು ?

2) 'ಶ್ರೀ ಹರಿಚರಿತೆ'ಯನ್ನು ಬರೆದವರು ಯಾರು ?

3) ಪಿ. ಲಂಕೇಶ್ ಅವರ ಆತ್ಮಕಥೆಯ ಹೆಸರೇನು ?

4) ಎಚ್. ಗೋವಿಂದಯ್ಯನವರು ಯಾವ ಮಾಸಿಕ ಪತ್ರಿಕೆಯ ಸಂಪಾದಕರಾಗಿದ್ದರು ?

5) 'ಹೋರಾಟದ ಬದುಕು' – ಈ ಆತ್ಮಕಥೆಯನ್ನು ಬರೆದವರು ಯಾರು ?

6) ಬರಗೂರು ರಾಮಚಂದ್ರಪ್ಪನವರ ಹುಟ್ಟೂರು ಯಾವುದು ?

7) ಪಾಂಡವರಲ್ಲಿ 'ಯುಧಿಷ್ಠಿರ' ಎಂದು ಯಾರನ್ನು ಕರೆಯುತ್ತಾರೆ ?

8) 'ದಾರುಕ' ಯಾರು ?

---